# ಲಾಂಗು ಲಿವಿಂಗು

ಲಾಂಗು ಹಿಡಿದಾಗಲೆಲ್ಲಾ ವಿತರಕರಿಗೆ ಶುಕ್ರದೆಸೆ. ಅದನ್ನು ಪಕ್ಕಕ್ಕೆ ಇಟ್ಟರೆ ಶನಿ ವಕ್ಕರಿಸಿದಂತೆ ಎನ್ನುವುದು ಈ ನಟನ ಮಟ್ಟಿಗೆ ಪ್ರತೀತಿ. ಮೌಢ್ಯ ಸಲ್ಲದು ಎಂದು ಪದೇಪದೇ ಲಾಂಗನ್ನು ಪಕ್ಕಕ್ಕೆ ಇಡಲು ಯತ್ನಿಸಿದರೂ ಅದು ಫಲ ಕೊಟ್ಟಿದ್ದು ಕಡಿಮೆ. ಒಂದು ದಶಕ, ಅದಕ್ಕೂ ಮುಂಚಿನ ಇನ್ನೊಂದು ದಶಕ ನಟ ಚಿತ್ರರಂಗವನ್ನು 'ಆಳಿದ್ದು' ತರಹೇವಾರಿ ಗಾತ್ರ, ಅಳತೆಗಳ ಲಾಂಗ್‌ಗಳ ಮೂಲಕ ಎನ್ನುವುದು ಅಗ್ಗಳಿಕೆ.

ಒಂದು ಕಡೆ ಸಣ್ಣ ತಾಯಿ ಸೆಂಟಿಮೆಂಟು, ಇನ್ನೊಂದು ಕಡೆ ಲಾಂಗ್ ಹಿಡಿದ ವೈಖರಿಯ ಪೆಪ್ಪರಮಿಂಟು ಇವೆರಡಿದ್ದರೆ ವಿತರಕರು ಸಲೀಸಾಗಿ ಬುಟ್ಟಿಗೆ ಬೀಳುತ್ತಾರೆ ಎಂಬ ಅಂದಾಜಿನಿಂದ ನಟನ ಕಾಲ್‌ಷೀಟನ್ನು ಪಡೆದ ಐನಾತಿ ನಿರ್ಮಾಪಕರು ಎಣಿಕೆಗೆ ಸಿಗುತ್ತಾರೆ. ಇಂಥ 'ಲಾಂಗ್ ಸ್ಟಾರ್' ಕಾಲ್‌ಷೀಟನ್ನು ಉತ್ತಮ ಮುಂಗಡ ಹಣ ಪಡೆದು ನೀಡುತ್ತಿದ್ದುದು ನಟನ ಪತ್ನಿ.

ತಾನು ಅಭಿನಯಿಸುವ ಪಾತ್ರಗಳ ತೂಕದಲ್ಲಿ ಸ್ಥಿರತೆ ಇಲ್ಲ ಎನ್ನುವುದು ನಾಯಕನ ಅರಿವಿಗೆ ಬಾರದೇ ಇರಲಿಲ್ಲ. ಚಿತ್ರೀಕರಣ ನಡೆಯುವಾಗ ಸುತ್ತ ಜಮಾಯಿಸಿದವರು ಚಪ್ಪಾಳೆ ಹೊಡೆದಾಗ ಮೊದಲು ಬೀಗುತ್ತಿದ್ದ ನಟ, ಆಮೇಲಾಮೇಲೆ ಅನುಮಾನಿಸತೊಡಗಿದರು. ಮನ ಕರಗುವಂತೆ ಕತೆ ಹೇಳಿದ ನಿರ್ದೇಶಕ, ಫೀಲ್ಡ್‌ವರ್ಕ್‌ನಲ್ಲಿ ವೀಕು ಎಂದು ಗೊತ್ತಾದ ಮೇಲೆ ಪೇಚಾಡಿಕೊಂಡು ಸುಮ್ಮನಾದದ್ದೂ ಇದೆ. ಇಷ್ಟಾಗಿಯೂ ಜನರಿಗೆ ಏನು ಬೇಕು ಎಂಬ ಜಿಜ್ಞಾಸೆ ಅವರನ್ನು ಕಾಡದೇ ಬಿಟ್ಟಿಲ್ಲ. ಹೊಸತನ್ನೇನಾದರೂ ಮಾಡೋಣ ಎಂದುಕೊಂಡು ಸೂಕ್ಷ್ಮ ಸಂವೇದನೆಯ ನಿರ್ದೇಶಕರನ್ನು ಹತ್ತಿರದಲ್ಲಿ ಕೂರಿಸಿಕೊಳ್ಳುವ ಅವರನ್ನು ದಿಕ್ಕುತಪ್ಪಿಸಿ, ಪಕ್ಕಕ್ಕೆ ಸರಿಸುವ ಯತ್ನವನ್ನು ಗಾಂಧಿನಗರದ ಕುಳಗಳು ನಿರಂತರವಾಗಿ ಮಾಡುತ್ತಿರುತ್ತಾರೆ.

ನಾಯಕತ್ವದ ಸಕಲೆಂಟು ಗುಣಗಳೂ ಅವರಲ್ಲಿ ಘನೀಭವಿಸಿವೆ ಎಂದು ಆಪ್ತೇಷ್ಟರು ಭಾವಿಸಿದಾಗಲೆಲ್ಲಾ ಅವರು ತಮಗಿಂತ ಹಿರಿಯರ ಕಡೆ ನೋಟ ಬೀರಿ, ಜಾರಿಕೊಂಡಿದ್ದು ಇದೆ. ಇಂಡಸ್ಟ್ರಿಯ ಕಷ್ಟನಷ್ಟಗಳನ್ನು ಮೈಮೇಲೆ ಎಳೆದುಕೊಳ್ಳುವಷ್ಟು ಪುರುಸೊತ್ತೂ ಅವರಿಗೆ ಇಲ್ಲವೆನ್ನಿ.

ದೈಹಿಕವಾಗಿ ಅವರು ವಯಸ್ಸಿಗಿಂತ ಚಿಕ್ಕವರಂತೆ ಕಾಣುತ್ತಾರೆ. ಮೊದಲು ಕನ್ನಡದ ನುಡಿಗಳನ್ನು ಅಗತ್ಯಕ್ಕಿಂತ ಹೆಚ್ಚು ವೇಗವಾಗಿ ಉಚ್ಚರಿಸುತ್ತಿದ್ದ ಮೂರು ಸತತ ಹಿಟ್‌ಗಳ ಈ ಆರಂಭಿಕ ನಟ, ಕಾಲಕ್ರಮೇಣ ತಿದ್ದಿಕೊಂಡರು. ಮೌನದಲ್ಲಿ, ಕಣ್ಣೋಟದಲ್ಲಿ ಅವರಿಗೆ ಖುದ್ದು ತಂದೆಯೇ ಹೆಚ್ಚು ಅಂಕಗಳನ್ನು ಕೊಟ್ಟ ನೆನಪು. 'ಕುಣಿತದಲ್ಲಿ ಎಂಥ ಮೋಡಿ' ಎಂದು ಈಗಲೂ ಹೊಗಳುವವರಿದ್ದಾರೆ. ಹರೆಯದ ನಟಿಯರೂ ಜೊತೆಗೆ ಹೆಜ್ಜೆ ಹಾಕುವಾಗ ಹೈರಾಣಾಗಿ, 'ಅಯ್ಯೋ ಶಿವನೇ' ಎಂದು ಉದ್ಗಾರ ತೆಗೆಯುತ್ತಾರೆ.

ಹಿಂದಿಯ ಎಸ್.ಆರ್.ಕೆ.ಗೂ ಇವರಿಗೂ ಒಂದು ವಿಷಯದಲ್ಲಿ ಸಾಮ್ಯತೆ ಇದೆ. ವಯಸ್ಸಿನಲ್ಲಿಯೂ ಸ್ವಲ್ಪವಷ್ಟೆ ವ್ಯತ್ಯಾಸ.

ನೂರಾರು ಸಿನಿಮಾಗಳನ್ನು ಮಾಡಿದ ಮೇಲೂ ಕಲಿಯುವುದು ಇನ್ನೂ ಇದೆ ಎಂದು ನಮ್ರತೆಯಿಂದ ನುಡಿಯುವ ವಿನಯಶೀಲ. ಇತ್ತೀಚೆಗೆ ರಾಜಕೀಯದ ಮೊಗಸಾಲೆಯಲ್ಲಿ ಓಡಾಡಿ, ಕೈಹಿಡಿದವರ ಸೋಲನ್ನು ಹತ್ತಿರದಿಂದ ಕಂಡು ಒಂದು ತೀರ್ಮಾನಕ್ಕೆ ಬಂದಿದ್ದಾರೆ: ರಾಜಕೀಯದಿಂದ ಇನ್ನು ತಮ್ಮ ಕುಟುಂಬದವರೆಲ್ಲ ದೂರ. ಇಷ್ಟಕ್ಕೂ 'ಲಾಂಗ್ ಲಿವ್' ಎಂದು ಅವರ ಕಿವಿ ಚುಚ್ಚುತ್ತಿರುವವರಿಂದ ಅದು ಹೇಗೆ ಮುಕ್ತಿ ಪಡೆಯುವರೋ?

**● ವಿಶಾಖ ಎನ್.**

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000,
Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68